**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**C.Mis. 266/2018**

ಪಿ**.**ಡಬ್ಲ್ಯೂ**. 1**

ದಿನಾಂಕಃ **13.08.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ **1** ಮತ್ತು **2** ನೇ ಎದುರುದಾರರ ಪರ ಶ್ರೀ**.**ಜಿಎನ್**.**ಬಿ**.**ವಕೀಲರಿಂದಃ

1. 1 ಮತ್ತು 2 ನೇ ಎದುರುದಾರರು ಲೈನ್ ಎಳೆಯುವ ಮೊದಲು ನೋಟೀಸ್ ಕೊಟ್ಟಿರಲಿಲ್ಲ. ಎದುರುದಾರರಿಗೆ ನಮ್ಮ ಜಮೀನಿನಲ್ಲಿ ಲೈನ್ ಎಳೆಯಬಾರದು ಎಂದು ಲಿಖಿತ ತಕರಾರು ನೀಡಿರಲಿಲ್ಲ. ನಮ್ಮ ಜಮೀನಿನಲ್ಲಿ ತೆಂಗು, ಮಾವು, ಜೋಳ ಬೆಳೆಯುತ್ತಿದ್ದೆವು. ನಮ್ಮ ಜಮೀನಿನಲ್ಲಿ ಒಂದು ಬೋರ್ ವೆಲ್ ಇತ್ತು. ಮಾರುಕಟ್ಟೆಯಲ್ಲಿ ನಾನು ಬೆಳೆದ ಬೆಳೆಯನ್ನು ಮಾರಾಟ ಮಾಡುತ್ತಿದ್ದೆನು ಬೆಳೆ ಮಾರಾಟ ಮಾಡಿದ ಬಗ್ಗೆ ಮತ್ತು ಆದಾಯ ಪಡೆದ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ನಿ.ಪಿ.10 ರನ್ವಯ ಲೈನ್ ಎಳೆದಿರುವ ಜಾಗದ ಪಕ್ಕದಲ್ಲಿ ಬೋರ್ ವೆಲ್ ಇದೆ ಎಂದರೆ ಸರಿ. ಈಗಲೂ ಬೋರ್ ವೆಲ್ ಇದೆ ಆದರೆ ಮೋಟಾರ್ 2-3 ದಿನಗಳಿಗೊಮ್ಮೆ ಸುಟ್ಟು ಹೋಗುತ್ತದೆ. ಯಾವ ಕಾರಣಕ್ಕೆ ಸುಟ್ಟು ಹೋಗುತ್ತದೆ ಎಂದು ಲೈನ್ ಎಳೆದಿರುವುರಿಂದ ಸುಟ್ಟು ಹೋಗುತ್ತದೆ ಎಂದು ನುಡಿದಿರುತ್ತಾರೆ. ನಿ,ಪಿ.11 ಫೋಟೋದಲ್ಲಿ ರುವ ತೋಟ ಈಗಲೂ ಇದೆ.

2. ಪ್ರತಿ ವರ್ಷ ಗ್ರಾಮ ಲೆಕ್ಕಾಧಿಕಾರಿ ಬೆಳೆ ಸಮೀಕ್ಷೆ ಮಾಡಿ ಪಹಣಿಯಲ್ಲಿ ನಮೂದು ಮಾಡುತ್ತಾರೆ. ನನ್ನ ಜಮೀನಿನ ಮೌಲ್ಯಕ್ಕೆ ಸಂಬಂಧಿಸಿದಂತೆ ನಾನು ಸಂಬಂಧಿಸಿದ ಇಲಾಖೆಯಿಂದ ದಾಖಲಾತಿ ಪಡೆದು ಹಾಜರುಪಡಿಸಿರುತ್ತೇನೆ. ದಿ.12.02.2016 ರ ಜಿಲ್ಲಾಧಿಕಾರಿಗಳ ಆದೇಶದಂತೆ ಎದುರುದಾರರು ಸೂಕ್ತ ಮತ್ತು

ವೈಜ್ಞಾನಿಕ ಪರಿಹಾರವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಹೊಂದಿಕೊಂಡಂತೆ ರಾಷ್ಟ್ರೀಯ ಅಥವಾ ರಾಜ್ಯ ಹೆದ್ದಾರಿ ಇಲ್ಲ ಆದರೆ ಜಮೀನಿಗೆ ಓಡಾಡಲು ರಸ್ತೆ ಇದೆ ಎಂದು ನುಡಿರುತ್ತಾರೆ. ಲೈನ್ ಭೂಮಿಯಿಂದ 30 ಅಡಿ ಎತ್ತರದಲ್ಲಿ ಇರುವುದರಿಂದ ಈಗಲೂ ನಾನು ಬೆಳೆ ಬೆಳೆಯುತ್ತಿದ್ದೇನೆ ಎಂದರೆ ಸರಿಯಲ್ಲ, ಅರಣ್ಯ ಇಲಾಹೆ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಮೌಲ್ಯ ಮಾಪನದಂತೆ ಮರಗಳಿಗೆ ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ಎದುರುದಾರರು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸೂಕ್ತ ಪರಿಹಾರವನ್ನು ಸ್ವೀಕರಿಸಿರುವುದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಲಿಖಿತ ತಕರಾರು ಇಲ್ಲದೇ ಪರಿಹಾರದ ಹಣವನ್ನು ಸ್ವೀಕರಿಸಿರುತ್ತೇನೆ, ನಾನು ಮೌಖಿಕ ತಕರಾರು ಮಾಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು
C.Mis. /20**19**

**ಪಿ.ಡಬ್ಲ್ಯೂ. 1**

ದಿನಾಂಕಃ**03.10.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ

ಮರುವಿಚಾರಣೆಃ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು